# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 966(1038)**
**ಸದಸ್ಯರ ಹೆಸರು : ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ)**
**ದಿನಾಂಕ : 16.12.2025**
**ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿ ನಗರದಲ್ಲಿ ಕಳೆದ 9 ತಿಂಗಳಲ್ಲಿ ಬೀದಿ ನಾಯಿಗಳ ಹಾವಳಿಯಿಂದ ಸುಮಾರು 16000 ಕ್ಕೂ ಹೆಚ್ಚು ಜನರಿಗೆ ನಾಯಿ ಕಡಿತ ಮತ್ತು 8 ಜನ ಸಾವನ್ನಪ್ಪಿರುವ ವಿಷಯವು ಇಲಾಖೆಯ ಗಮನಕ್ಕೆ ಬಂದಿದೆಯೇ; | ತಾಲ್ಲೂಕು ಆರೋಗ್ಯಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಳಗಾವಿ ರವರು ನೀಡಿದ ವರದಿಯನುಸಾರ ಬೆಳಗಾವಿ ನಗರದಲ್ಲಿ ಕಳೆದ 09 ತಿಂಗಳಿನಲ್ಲಿ 478 ಜನರು ನಾಯಿ ಕಡಿತಕ್ಕೆ ಒಳಗಾಗಿದ್ದು, ನಾಯಿ ಕಡಿತದಿಂದ ಯಾವುದೇ ಸಾವೀಗೀಡಾದ ಪ್ರಕರಣಗಳು ಇರುವುದಿಲ್ಲ. |
| ಆ) | ಸದರಿ ವಿಷಯವು ಇಷ್ಟೊಂದು ಗಂಭೀರ ಸ್ವರೂಪ ಪಡೆದುಕೊಂಡಿದ್ದರೂ ಸಹ ಬೆಳಗಾವಿ ಮಹಾನಗರ ಪಾಲಿಕೆ ವತಿಯಿಂದ ಕ್ರಮ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಳಗಾವಿ ಮಹಾನಗರ ಪಾಲಿಕೆಯಿಂದ ಈಗಾಗಲೇ ಬೀದಿ ನಾಯಿಗಳ ಹಾವಳಿಯನ್ನು ತಡೆಗಟ್ಟಲು ಎಬಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ. 2022-23 ರಿಂದ ಇಲ್ಲಿಯವರೆಗೆ 6734 ಬೀದಿ ನಾಯಿಗಳ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಿ ARV ಲಸಿಕೆ ನೀಡಲಾಗಿರುತ್ತದೆ. |
| ಇ) | ಬಂದಿದ್ದಲ್ಲಿ, ಯಾವ ರೀತಿಯ ಕ್ರಮಗಳು ಮತ್ತು ಕ್ರಮಗಳ ನಂತರ ಪ್ರಕರಣಗಳ ಸಂಖ್ಯೆಯಲ್ಲಿ ಎಷ್ಟು ಇಳಿಕೆ ಕಂಡಿದೆ; | 2022-23ನೇ ಸಾಲಿನ ಸಮೀಕ್ಷೆ ವರದಿಯನುಸಾರ 19507 ಬೀದಿ ನಾಯಿಗಳ ಸಂಖ್ಯೆ ಇರುವುದು ಕಂಡು ಬಂದಿರುತ್ತದೆ. ಈಗಾಗಲೇ ಎಬಿಸಿ ಸೆಂಟರ್‌ನ್ನು ಸ್ಥಾಪಿಸಿ ಗುತ್ತಿಗೆದಾರರ ಮೂಲಕ 6734 ನಾಯಿಗಳ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಿ, AVR ಲಸಿಕೆ ನೀಡಿ, ಸದರಿ ನಾಯಿಗಳನ್ನು 3 ದಿನಗಳವರೆಗೆ ಆರೈಕೆ ಮಾಡಿ, ಪುನಃ ಅವುಗಳನ್ನು ಹಿಡಿದ ಜಾಗಕ್ಕೆ ಬಿಡಲಾಗುವುದು. ಈ ಪ್ರಕ್ರಿಯೆಯಿಂದ ಪಾಲಿಕೆ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಸಂಖ್ಯೆ ಗಣನೀಯವಾಗಿ ಇಳಿಕೆಯಾಗುತ್ತಿದ್ದು, ಪಾಲಿಕೆ ವ್ಯಾಪ್ತಿಯಲ್ಲಿ ಬೀದಿನಾಯಿಗಳ ಉಪಟಳ ಕಡಿಮೆಯಾಗುತ್ತಿದೆ. |
| ಈ) | ಬೀದಿ ನಾಯಿಗಳು ಕಡಿತದಿಂದ ಸಾವನ್ನಪ್ಪಿದ ಮೃತರ ಕುಟುಂಬಕ್ಕೆ ಇಲಾಖೆಯಿಂದ ಪರಿಹಾರ ಘೋಷಿಸಿದೆಯೇ; ಇದ್ದಲ್ಲಿ ಎಷ್ಟು ಪರಿಹಾರ ಘೋಷಿಸಲಾಗಿದೆ ಎಂಬುದರ ಬಗ್ಗೆ ಮಾಹಿತಿ ನೀಡುವುದು? | ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 159 ಜಿಇಎಲ್ 2023 (ಇ) ದಿನಾಂಕ:18.11.2025ರಂತೆ Death of the victim by the attack of stray dogs or death of the victim by Rabies due to bite of the stray dogs Rs.5.00 lakh.<br><br>ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೀದಿ ನಾಯಿ ಕಡಿತದಿಂದ ಯಾವುದೇ ಸಾವು ಸಂಭವಿಸಿದ ಪ್ರಕರಣ ದಾಖಲಾಗಿರುವುದಿಲ್ಲ. |

**ಸಂಖ್ಯೆ: ನಅಇ 59 ಎಸಿಬಿ 2025 (ಇ)**

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ
ಸಚಿವರು